3-4 ದಿನಗಳಲ್ಲಿ ವ್ಯವಸ್ಥೆ ಮಾಡುತ್ತೇವೆ. ಮಾಡಬಹುದೇ ಸ್ವಾಮಿ? ನೀವು ಏನು ಐಡೆಂಟಿಫೈ ಮಾಡಿದ್ದೀರಿ, ಅವರಿಗೆ ಕಾರ್ಡ್ ವಿತರಣೆ ಮಾಡುವ ಕೆಲಸವನ್ನು ಮುಖ್ಯ ಮಂತ್ರಿಗಳೇ ಮಾಡಿ. ನೀವೇನು ಅವರನ್ನು ಹುಡುಕಿಕೊಂಡು ಹೋಗಬೇಡಿ, ನಾವೇ ಅವರನ್ನು ಇಲ್ಲಿಗೆ ಕರೆದುಕೊಂಡು ಬರುತ್ತೇವೆ. ನಿಮ್ಮ ಮನೆ ಮುಂದೆ ಕ್ಯೂ ನಿಲ್ಲಿಸುತ್ತೇವೆ. ನೀವೇ ನಿಮ್ಮ ಕೈಯಿಂದ ವಿತರಣೆ ಮಾಡಿ.

ಶ್ರೀ ಜೆ.ಹೆಚ್.ಪಟೇಲ್: ಅವರು 6 ಲಕ್ಷ ಜನರ ಜೊತೆಗೆ ನೀವು ಕುಳಿತು ಕೊಳ್ಳಿ, ನಾನು ಕುಳಿತುಕೊಳ್ಳುತ್ತೇನೆ. ನಿಮಗೆ ಕೆಲಸ ಆಗಬೇಕೇ ಬೇಡವೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕಳೆದು ಹೋಗಿರುವ, ಹರಿದು ಹೋಗಿರುವ ಕಾರ್ಡುಗಳನ್ನು ಬದಲಾಯಿಸಿ ಕೊಡುವ ವ್ಯವಸ್ಥೆಯಾದರೂ ಪ್ರತ್ಯೇಕವಾಗಿ ಆಗಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಕೆಲಸ ಮಾಡಿಲ್ಲ.

ಶ್ರೀ ಜೆ.ಹೆಚ್.ಪಟೇಲ್: ನಾವು ಐಡೆಂಟಿಫೈ ಮಾಡಿದ್ದೇವೆ. ಚುನಾವಣೆ ಕಾರಣಕ್ಕೆ ಅಥವಾ ಬೇರೆ ಕಾರಣಕ್ಕೆ ಅವರಿಗೆ ಕಾರ್ಡ್ ವಿತರಣೆ ಮಾಡಲು ಆಗಿಲ್ಲ. ಐಡೆಂಟಿಫೈ ಮಾಡಿಸಿದ್ದೇ ಅದಕ್ಕೋಸ್ಕರ, ಸರ್ವೆ ಮಾಡಿಸಿದ್ದೇ ಅದಕ್ಕೋಸ್ಕರ. ಬಡವರಿಗೆ ತೊಂದರೆಯಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಂಡು ಕಾರ್ಡ್ ಕೊಡುತ್ತೇವೆಂದು ಹೇಳಿದ ಮೇಲೂ ಮತ್ತೆ ಅವರನ್ನು ಇಲ್ಲಿಗೆ ಕರೆದುಕೊಂಡು ಬರುತ್ತೇನೆಂದು ಹೇಳುತ್ತಿರಲ್ಲಾ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯ ಮಂತ್ರಿಗಳೇ, ಸಮೀಕ್ಷೆಯಾಗಿ ಎಷ್ಟು ವರ್ಷವಾಯಿತು? ಸಮೀಕ್ಷೆಯಾಗಿ ಎರಡು ವರ್ಷವಾಗಿದೆ. ನಾನು ತಮ್ಮ ಗಮನಕ್ಕೆ ಎಷ್ಟೋ ಸಾರಿ ತಂದಿದ್ದೇನೆ.

ಅಧ್ಯಕ್ಷರು: ಕಾರ್ಡ್ ವಿತರಣೆ ಮಾಡುತ್ತೇವೆಂದು ಹೇಳಿದ್ದಾರಲ್ಲಾ, ದಯಮಾಡಿ ಸಹಕರಿಸಿ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಟಿ.ನರಸೀಪುರ ತಾಲ್ಲೂಕು ಮುಡುಕುತೊರೆ ಎರಡನೇ ಹಂತದ ತಲಕಾಡು ಹಾಗೂ ಮೇದನಿ ಏತ ನೀರಾವರಿ ಯೋಜನೆ

3 (196)

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ತಾಲ್ಲೂಕು, ಮುಡುಕು ತೊರೆ ಎರಡನೆ ಹಂತದ ತಲಕಾಡು

ಹಾಗೂ ಮೇದನಿ ಏತ ನೀರಾವರಿ ಯೋಜನೆ ಯಾವಾಗ ಮಂಜೂರಾಗಿದೆ;

ಆ) ಸದರಿ ಯೋಜನೆಗೆ ಈವರೆವಿಗೆ ಖರ್ಚಾಗಿರುವ ಹಣವೆಷ್ಟು ಹಾಗೂ ಎಂದು ಅವುಗಳನ್ನು ಪೂರ್ಣಗೊಳಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 1. ಟಿ.ನರಸೀಪುರ ತಾಲ್ಲೂಕಿನ ಮುಡುಕುತೊರೆ ಎರಡನೆ ಹಂತ ಏತ ನೀರಾವರಿ ಯೋಜನೆ 9-3-88ರಲ್ಲಿ ಮಂಜೂರಾಗಿರುತ್ತದೆ.

2. ತಲಕಾಡು ಏತ ನೀರಾವರಿ ಯೋನೆ 21-12-88ರಲ್ಲಿ ಮಂಜೂರಾಗಿರುತ್ತದೆ.

3. ಮೇದಿನಿ ಏತ ನೀರಾವರಿ ಯೋಜನೆ 23-12-88 ರಲ್ಲಿ ಮಂಜೂರಾಗಿರುತ್ತದೆ,.

ಆ) ಸದರಿ ಯೋಜನೆಗಳಿಗೆ 1:98ರ ಅಂತ್ಯದವರೆವಿಗೂ ಖರ್ಚಾಗಿರುವ ಹಣದ ವಿವರಗಳು ಕೆಳಕಂಡಂತಿವೆ.

(ಲಕ್ಷ ರೂ.ಗಳಲ್ಲಿ)

1.	ಮುಡುಕುತೊರೆ 2ನೇ ಹಂತ ಏತ ನೀರಾವರಿ ಯೋಜನೆ	:22.343
2.	ತಲಕಾಡು ಏತ ನೀರಾವರಿ ಯೋಜನೆ	:6.212
3.	ಮೇದಿನಿ ಏತ ನೀರಾವರಿ ಯೋಜನೆ	:24.338

ಈ ಯೋಜನೆಗಳನ್ನು ಅನುದಾನದ ಲಭ್ಯತೆ ಮೇರೆಗೆ ಇನ್ನೆರಡು ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಎನ್.ಕೃಷ್ಣಪ್ಪ: ಮುಡುಕುತೊರೆ, ತಲಕಾಡು ಮತ್ತು ಮೇದಿನಿ ಏತ ನೀರಾವರಿ ಯೋಜನೆಗಳು 1988ರಲ್ಲಿ ಪ್ರಾರಂಭವಾಗಿರುವುದು. ಬಹುಶಃ ಈ ಯೋಜನೆಗಳು ಪ್ರಾರಂಭವಾಗಿ 10 ವರ್ಷಗಳಾಗಿವೆ. ಇದರ ಒಟ್ಟು ಮೊತ್ತ ಏನು ಅಂದಾಜು ಮಾಡಲಾಗಿತ್ತು? ಈಗ ಖರ್ಚು ಮಾಡಿರುವ ಹಣದ ವಿವರ ನೋಡಿದರೆ ಮುಡುಕುತೊರೆಗೆ 22 ಲಕ್ಷ, ತಲಕಾಡಿಗೆ 6ಲಕ್ಷ ಮತ್ತು ಮೇದಿನಿಗೆ 24 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಮಾಹಿತಿ ಕೊಟ್ಟಿದ್ದಾರೆ. ಇಷ್ಟು ಹಣ ಖರ್ಚು ಮಾಡುವುದಕ್ಕೆ ಹತ್ತು ವರ್ಷಗಳನ್ನು ತೆಗೆದುಕೊಂಡಿದ್ದಾರೆ. ಅನುದಾನವನ್ನು

ಅನುಸರಿಸಿ ಇನ್ನೆರಡು ವರ್ಷಗಳಲ್ಲಿ ನಾವು ಯೋಜನೆಯನ್ನು ಮುಗಿಸುತ್ತೇವೆಂದು ಮಂತ್ರಿಗಳು ಆಶ್ವಾಸನೆ ಕೊಡುತ್ತಿದ್ದಾರೆ. ಆದರೆ ಇದರ ಒಟ್ಟು ಮೊತ್ತ ಎಷ್ಟು? ಪ್ರತಿ ವರ್ಷ ಖರ್ಚು ಮಾಡಿರುವ ಹಣ ಎಷ್ಟು? ಈ ವರ್ಷದ ಆಯವ್ಯಯದಲ್ಲಿ ಎಷ್ಟು ಪ್ರಾವಿಷನ್ ಮಾಡಿಕೊಂಡಿದ್ದಾರೆ? ಈ ಯೋಜನೆಗಳನ್ನು ಯಾವಾಗ ಮಾಡಿ ಮುಗಿಸಿಕೊಡುತ್ತಾರೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ನಾವು ಉತ್ತರ ಕೊಟ್ಟಿರುವ ಪ್ರಕಾರ ಈ ಕೆಲಸವನ್ನು ಏತ ನೀರಾವರಿ ನಿಗಮಕ್ಕೆ ವಹಿಸಿಕೊಡಲಾಗಿತ್ತು. ಅವರು ಮೊನ್ನೆತಾನೇ ಈ ಕೆಲಸವನ್ನು ನಮ್ಮ ಸಣ್ಣ ನೀರಾವರಿ ಇಲಾಖೆಗೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರ ಕಳಕಳಿ ಏನಿದೆ ಅದನ್ನು ಅರ್ಥ ಮಾಡಿಕೊಂಡು ಈ ಸಾರಿ ಹೆಚ್ಚಿನ ಹಣವನ್ನು ಆಯವ್ಯಯದಲ್ಲಿ ಇದಕ್ಕೆ ಕೊಟ್ಟು, ಎರಡು ವರ್ಷ ಎಂದು ಏನು ಹೇಳಿದ್ದಾರೆ, ಆ ಎರಡು ವರ್ಷದೊಳಗೆ ಈ ಕೆಲಸವನ್ನು ಪೂರೈಸುವುದಕ್ಕೆ ಆದ್ಯತೆ ಕೊಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

1997-98ರಲ್ಲಿ ಮಸೀದಿಗಳಿಗೆ ಹಣ ಮಂಜೂರಾತಿ

4 (26)

ಶ್ರೀ ಯು.ಆರ್.ಸಭಾಪತಿ (ಉಡುಪಿ):ಮಾನ್ಯ ರಾಜ್ಯ ಗೃಹ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1997-98ನೇ ಸಾಲಿನ ಎಷ್ಟು ಮಸೀದಿಗಳಿಗೆ ವಕ್ಫ್ ಬೋರ್ಡ್‌ನಿಂದ ಹಣ ಮಂಜೂರು ಮಾಡಲಾಗಿದೆ?

ಆ) 1997-98ನೇ ಸಾಲಿನಲ್ಲಿ ಖರ್ಚು ಮಾಡಲು ಉಳಿದಿರುವ ಹಣ ಎಷ್ಟು?

ಇ) ಬಾಕಿ ಉಳಿದಿರುವ ಹಣವನ್ನು ಯಾವಾಗ ಖರ್ಚು ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 515.

ಆ) ರೂ. 50.00 ಲಕ್ಷ.

ಇ) ದಿನಾಂಕ 31-3-1998ರೊಳಗೆ

11.30 ಎ.ಎಂ